## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಂಗವಿಕಲರ ಮಾಸಿಕ ನಿರ್ವಹಣಾ ಭತ್ಯೆಯನ್ನು ರೂ.125/-ರಿಂದ ರೂ 200/-ಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ;-[1]ಸರ್ಕಾರದ ಆದೇಶ ಸಂಖ್ಯೆ:ಮಮಇ:297:ಪಿಹೆಚ್‌ಪಿ: 1997 ದಿನಾಂಕ:05-03-1998
[2]]ಸರ್ಕಾರದ ಆದೇಶ ಸಂಖ್ಯೆ:ಮಮಇ:528:ಪಿಹೆಚ್‌ಪಿ:2001,ಬೆಂಗಳೂರು, ದಿನಾಂಕ: 19-04-2002
[3] 2006-07ನೇ ಸಾಲಿನ ಆಯವ್ಯಯ ಭಾಷಣ

====

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಸಂಖ್ಯೆ [1] ರ ದಿನಾಂಕ:05-03-1998 ಸರ್ಕಾರಿ ಆದೇಶದಲ್ಲಿ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ನಿರ್ವಹಣ ಭತ್ಯೆಯನ್ನು ರೂ.75/-ರಿಂದ ರೂ.100/-ಕ್ಕೆ ಹೆಚ್ಚಿಸಿ ಮಂಜೂರಾತಿ ಆದೇಶ ಹೊರಡಿಸಿದೆ.

ಮೇಲೆ ಓದಲಾದ ಕ್ರಮಸಂಖ್ಯೆ [2] ರ ದಿನಾಂಕ: 19-04-2002ರ ಸರ್ಕಾರಿ ಆದೇಶದಲ್ಲಿ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ನಿರ್ವಹಣ ಭತ್ಯೆಯನ್ನು ರೂಪಾಯಿ 100/-ರಿಂದ ರೂ. 125/-ಕ್ಕೆ ಹೆಚ್ಚಿಸಿ ಸರ್ಕಾರದ ಮಂಜೂರಾತಿ ಆದೇಶ ಹೊರಡಿಸಿದೆ.

2006-07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅಂಗವಿಕಲರ ಅಗತ್ಯಗಳನ್ನು ಪರಿಶೀಲಿಸಿ ಅವರಿಗೆ ನೀಡುತ್ತಿರುವ ಮಾಸಿಕ ನಿರ್ವಹಣ ಭತ್ಯೆಯನ್ನು ರೂ.125/-ರಿಂದ ರೂ.200/-ಗಳಿಗೆ ಹೆಚ್ಚಿಸುವ ನಿರ್ಧಾರವನ್ನು ಘೋಷಿಸಲಾಗಿದೆ. ಅದರಂತೆ ಈ ಆದೇಶ ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಮಮಅ 153 ಪಿಹೆಚ್‌ಪಿ 2005, ಬೆಂಗಳೂರು, ದಿನಾಂಕ:27-06-2006.</u>

ಅಂಗವಿಕಲರಿಗೆ ಈಗಾಗಲೇ ನೀಡುತ್ತಿರುವ ಮಾಸಿಕ ನಿರ್ವಹಣಾ ಭತ್ಯೆಯನ್ನು ದಿನಾಂಕ: 01-04-2006 ರಿಂದ ಜಾರಿಗೆ ಬರುವಂತೆ ರೂ.125/-ರಿಂದ ರೂ.200/-[ರೂಪಾಯಿ ಇನ್ನೂರು ಮಾತ್ರ]ಗಳಿಗೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ಸಂಬಂಧಿಸಿದ ಆಯವ್ಯಯ ಲೆಕ್ಕ ಶೀರ್ಷಿಕೆ 2235-02-101-0-20 [ಯೋಜನೇತರ] ಅಡಿಯಲ್ಲಿ ಭರಿಸತಕ್ಕದ್ದು,

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ:298:ವೆಚ್ಚ-3/2006 ಮತ್ತು ಸಂಖ್ಯೆ:ಎಫ್‌ಡಿ:1105-ವೆಚ್ಚ-5/2006 ದಿನಾಂಕ:22-06-2006ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಚಂದ್ರಮ್ಮ),
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,

ಇವರಿಗೆ,
[1]ಸಂಕಲನಕಾರರು ರಾಜ್ಯ ಕರ್ನಾಟಕ ಪತ್ರ, ಬೆಂಗಳೂರು- ಇವರಿಗೆ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಳಿಸಿ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಹಾಗೂ ಸರ್ಕಾರಕ್ಕೆ ತಲಾ 500 ಪ್ರತಿಗಳನ್ನು ಸರಬರಾಜು ಮಾಡುವಂತೆ ಕೋರಲಾಗಿದೆ.

ಪ್ರತಿ:
[1]ಮಹಾಲೇಖಪಾಲರು, [ಲೆಕ್ಕಪತ್ರ] ಕರ್ನಾಟಕ, ಬೆಂಗಳೂರು
[2]ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ,ಬೆಂಗಳೂರು,
[3]ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
[4]ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,
[5]ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಬೆಂಗಳೂರು
[6]ಎಲ್ಲಾ ತಾಲ್ಲೂಕಿನ ತಹಶೀಲ್ದಾರಿಗೆ.
[7]ಎಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
[8]ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು
[9]ಉಪ ನಿರ್ದೇಶಕರು, ಎನ್. ಎಂ, ಸಿ,ಖನಿಜ 'ಭವನ'ಬೆಂಗಳೂರು.
10]ಅಧೀನ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ ವೆಚ್ಚ-3 ಹಾಗೂ ವೆಚ್ಚ-5,ವಿಧಾನ ಸೌಧ,ಬೆಂಗಳೂರು.
11] ಮಾನ್ಯ ಉಪ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ,ವಿಧಾನ ಸೌಧ,ಬೆಂಗಳೂರು.
13]ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ,
14]ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ,
15]ಪ್ರಧಾನ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರುಗಳಿಗೆ, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,
[16]ಶಾಖಾ ರಕ್ಷಾ ಕಡತ.